**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**ಓ.ಎಸ್.224/2022**

ಸಾಕ್ಷಿಯನ್ನು ದಿಃ **16.08.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ** HCK **ವಕೀಲರಿಂದಃ-**

ಸರ್ವೇ ನಂಬರ್ 51 ರಲ್ಲಿರುವ ದಾವಾ ಷೆಡ್ಯೂಲ್ ಸ್ವತ್ತಾದ ಒಂದುಕಾಲು ಎಕರೆ ಜಮೀನನ್ನು ನಾನೇ ಉಳುಮೆ ಮಾಡುತ್ತೇನೆ. ದಾವಾ ಸ್ವತ್ತು ಮಲ್ಲಿನಾಥಪುರ ಗ್ರಾಮದಲ್ಲಿದೆ. ಈಗ ತೋರಿಸುತ್ತಿರುವ ಪಹಣಿ ದಾವಾ ಸ್ವತ್ತಿಗೆ ಸಂಬಂಧಿಸಿದ 2024-25ನೇ ಸಾಲಿನ ಪಹಣಿ ಎಂದರೆ ಸರಿ. ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿ ಕಾಣಿಸಿದ ಜಮೀನಿಗೆ ನನ್ನ ತಂದೆ ಈಗ ಸಂಪೂರ್ಣ ಮಾಲೀಕರು ಎಂದರೆ ಸರಿ. ದಾವಾ ಸ್ವತ್ತಿಗೆ ನನ್ನ ತಂದೆ ಕಂದಾಯ ಪಾವತಿಸುತ್ತಿದ್ದಾರೆ. ಕಂದಾಯ ಪಾವತಿಸಿದ ಬಗ್ಗೆ ರಶೀದಿ ಪಡೆದುಕೊಂಡಿದ್ದಿರಾ ಎಂದರೆ ನನಗೆ ಗೊತ್ತಿಲ್ಲ. ಕಂದಾಯವನ್ನು ನನ್ನ ತಂದೆ ಪಾವತಿ ಮಾಡುತ್ತಿದ್ದಾರೆ. ಕಂದಾಯ ಪಾವತಿ ಮಾಡಿದ ಬಗ್ಗೆ ಗ್ರಾಮ ಲೆಕ್ಕಾಧಿಕಾರಿ ದಾಖಲೆ ನೀಡುತ್ತಾರೆ. ಅದನ್ನು ಕಂದಾಯ ರಶೀದಿ ಎನ್ನುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾವು ಕೃಷಿ ಪಾಸ್ ಪುಸ್ತಕ ಮಾಡಿಸಿಲ್ಲ. ಪಟ್ಟಾಪುಸ್ತಕ ಪಡೆದುಕೊಂಡಿದ್ದಿರಾ ಎಂದರೆ ನಾನು ಪಡೆದುಕೊಂಡಿಲ್ಲ. ನನ್ನ ತಂದೆ ಪಟ್ಟಾಪುಸ್ತಕ ಪಡೆದುಕೊಂಡಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಗೆ ಪ್ರತಿವಾದ ಪತ್ರವನ್ನು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನನ್ನ ತಂದೆಯ ಪರವಾಗಿಯೂ ಸಹ ಸಲ್ಲಿಸಿದ್ದೇನೆ. ನನ್ನ ಪ್ರತಿವಾದ ಪತ್ರವನ್ನು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ದಾವಾ ಸ್ವತ್ತಿನ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದೆ ಎಂದು ಸಲ್ಲಿಸಿದ್ದೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಂದೆಯ ಬಳಿ ಕೃಷಿ ಪಾಸ್ ಪುಸ್ತಕ ಮತ್ತು ಪಟ್ಟಾ ಪುಸ್ತಕ ಇರಬೇಕು ಎಂದರೆ ನನಗೆ ಗೊತಿಲ್ಲ. ನನ್ನ ತಂದೆಯ ಬಳಿ ಕೇಳಬೇಕು. ಆ ದಾಖಲೆಗಳು ನನ್ನ ತಂದೆಯ ಬಳಿ ಇವೆಯೋ ಇಲ್ಲವೇ ಎಂದು ತಿಳಿದುಕೊಂಡು ಹಾಜರುಪಡಿಸಲು ತೊಂದರೆ ಇಲ್ಲ.

ದಾವಾ ಸ್ವತ್ತು ನನ್ನ ತಂದೆಯ ಹೆಸರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನಿಪಿ–6ರ ಪಹಣಿಯ ಪ್ರಕಾರ ನನ್ನ ತಂದೆಗೆ ದಾವಾ ಸ್ವತ್ತು ಎಂ.ಆರ್.ಹೆಚ್ 22/2021–22 ದಿಃ 16.04.2022ರ ವಿಭಾಗದ ಮೂಲಕ ಬಂದಿದೆ ಎಂದು ನಮೂದಾಗಿದೆ ಎಂದರೆ ಸರಿ. ದಾವಾ ಸ್ವತ್ತು ಈ ಹಿಂದೆ ನನ್ನ ತಂದೆ ಮತ್ತು ಕುಳ್ಳಮ್ಮರವರ ಜಂಟಿ ಖಾತೆಯಲ್ಲಿತ್ತು ಎಂದರೆ ಸರಿ. ನಿಪಿ–5 ರ ಪಹಣಿಯ ಪ್ರಕಾರ ಕಾಲಂ ನಂ. 12 ರಲ್ಲಿ ನನ್ನ ತಂದೆ ಮತ್ತು ಕುಳ್ಳಮ್ಮರವರ ಜಂಟೀ ಹೆಸರಿನಲ್ಲಿ ದಾವಾ ಸ್ವತ್ತು ಇದೆ ಎಂದರೆ ಸರಿ. ಈಗ ತೋರಿಸುತ್ತಿರುವ ಎಂ.ಆರ್.ಹೆಚ್. 22/2021–22ರಲ್ಲಿ ಸಿವಿಲ್ ಕೋರ್ಟ್ ನ ಆದೇಶ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿ–7 ಎಂದು ಗುರುತಿಸಲಾಯಿತು. ಖಾತೆ ಬದಲಾವಣೆಗೆ ನನ್ನ ತಂದೆ ಅರ್ಜಿ ಕೊಟ್ಟಿದ್ದರು. ಈಗ ತೋರಿಸುತ್ತಿರುವ ದಾಖಲೆ ದಿಃ 06.04.2021 ರಂದು ನನ್ನ ತಂದೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಕೋರಿ ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲು ಎಂದರೆ ಸರಿ. ಅದನ್ನು ನಿಪಿ.8 ಎಂದು ಗುರುತಿಸಲಾಯಿತು. ನನ್ನ ತಂದೆಯ ಹೆಸರಿನಲ್ಲಿ ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ಇಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ. ದಾವಾ ಸ್ವತ್ತು ಅಸಲು ದಾವಾ ಸಂಃ 243/2006 ರಲ್ಲಿ ಆದ ವಿಭಾಗದ ಮೂಲಕ ಬಂದ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ನನ್ನ ತಂದೆಯನ್ನು ಹೊರತುಪಡಿಸಿ ಅವರ ಸಹೋದರ ಸಹೋದರಿಯರಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ನನ್ನತಂದೆ ದಾವಾ ಸ್ವತ್ತಿನ ಮಾಲೀಕರು ಎಂದರೆ ಸರಿ. ದಾವಾ ಸ್ವತ್ತು 2012 ರಲ್ಲಿ ನನ್ನ ತಂದೆಗೆ ವಿಭಾಗದ ಮೂಲಕ ಬಂತು ಎಂದರೆ ಸರಿ. ಇದೇ ನ್ಯಾಯಾಲಯದಲ್ಲಿ ಆಸಲು ದಾವಾ ಸಂಃ 243/2006 ರಂತೆ ನನ್ನ ತಂದೆ, ಅಜ್ಜಿ, ನನ್ನ ತಂದೆಯ ಸಹೋದರರು ಮತ್ತು ಸಹೋದರಿಯರ ಮಧ್ಯೆ ದಾವೆ ನಡೆಯಿತು ಎಂದರೆ ನಾನು ಇರಲಿಲ್ಲ. ಸದರಿ ದಾವೆಯಲ್ಲಿ ದಿಃ 20.10.2012 ರಲ್ಲಿ ರಾಜಿಯ ಮೂಲಕ ದಾವಾ ಸ್ವತ್ತು ನನ್ನ ತಂದೆಗೆ ಬಂದು ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಆದ ರಾಜಿಯ ಪ್ರಕಾರ ನನ್ನ ತಂದೆಯ ಹಿಸ್ಸೆಗೆ ಒಟ್ಟು 10 ಐಟಂ ಆಸ್ತಿಗಳು ಬಂದಿವೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ನನ್ನ ತಂದೆಯ ಹೆಸರಿನಲ್ಲಿ ಬೇರೆ ಆಸ್ತಿ ಇಲ್ಲ.

ಕುಳ್ಳಮ್ಮ ಮಾಲೇಗೌಡ ಎಂದರೆ ನನ್ನ ಅಜ್ಜಿ. ಅವರು ಈಗ ಬದುಕಿಲ್ಲ. ಈಗ ತೋರಿಸುತ್ತಿರುವ ಪಹಣಿಯಲ್ಲಿರುವ ಕುಳ್ಳಮ್ಮ ಮತ್ತು ಸಣ್ಣೇಗೌಡ ಎಂದರೆ ನನ್ನ ಅಜ್ಜಿ ಮತ್ತು ನನ್ನ

ತಂದೆ. ಸದರಿ ಪಹಣಿಯನ್ನು ನಿಪಿ-9 ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರುವ ಪಹಣಿಯ ಪ್ರಕಾರ ನನ್ನ ತಂದೆಯ ಹೆಸರಿನಲ್ಲಿ ಬೊಮ್ಮಲಾಪುರದ ಸರ್ವೆ ನಂ. 38 ರಲ್ಲಿ 2 ಎಕರೆ 16 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿಪಿ-10 ಎಂದು ಗುರುತಿಸಲಾಯಿತು. ಹುಣಸೂರು ತಾಲ್ಲೂಕು ಗೌಡಗೆರೆ ಹೋಬಳಿಯ ಕೃಷ್ಣಾಪುರ ಗ್ರಾಮದಲಿ ನನ್ನ ತಂದೆಗೆ ಸೇರಿದ ಜಮೀನು ಇದೆ ಎಂದರೆ ಇಲ್ಲ. ಈಗ ತೋರಿಸುತ್ತಿರುವ ಪಹಣಿಯಲ್ಲಿರುವ ಸಣ್ಣೇಗೌಡ ಬಿನ್ ಮಾಲೇಗೌಡ ಎಂದರೆ ನನ್ನ ತಂದೆ. ಸದರಿ ಪಹಣಿಯನ್ನು ನಿಪಿ-11 ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರುವ ಪಹಣಿಯ ಪ್ರಕಾರ ನನ್ನ ತಂದೆ ಮತ್ತು ದೊಡ್ಡಪ್ಪನ ಹೆಸರಿನಲ್ಲಿ ಸರ್ವೇ ನಂಬರ್ 547/1ಬಿ ಯಲ್ಲಿ 18 ಗುಂಟೆ ಜಂಟಿಯಾಗಿದೆ ಎಂದರೆ ಸರಿ. ಸದರಿ ಪಹಣಿಯನ್ನು ನಿಪಿ-12 ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರುವ ಪಹಣಿಯ ಪ್ರಕಾರ ನನ್ನ ತಂದೆ ಮತ್ತು ದೊಡ್ಡಪ್ಪನ ಹೆಸರಿನಲ್ಲಿ ಸರ್ವೇ ನಂಬರ್ 547/1ಎ1 ರಲ್ಲಿ ತಲಾ 6 ಗುಂಟೆ ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿಪಿ-13 ಎಂದು ಗುರುತಿಸಲಾಯಿತು. ನನ್ನ ತಾಯಿಯ ಹೆಸರಿನಲ್ಲಿ ಹುಸೇನ್‌ಪುರ ನಾಲಾ ಗ್ರಾಮದ ಸರ್ವೇ ನಂಬರ್ 225 ರಲ್ಲಿ 20 ಗುಂಟೆ ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿಪಿ-14 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಎಲ್ಲಾ ಆಸ್ತಿಗಳು ಇದ್ದರೂ ಕೂಡ ದಾವಾ ಸ್ವತ್ತನ್ನು ಹೊರತುಪಡಿಸಿ ನನ್ನ ತಂದೆಗೆ ಬೇರೆ ಆಸ್ತಿಗಳು ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನನ್ನ ತಂದೆಯ ಹೆಸರಿಗೆ ಆಗಿಲ್ಲ ಎಂದು ನುಡಿಯುತ್ತಾರೆ. ಈಗ ನನಗೆ ತೋರಿಸಿದ ಪಹಣಿಗಳು ನನ್ನ ತಂದೆಯ ಹೆಸರಿನಲ್ಲಿವೆ ಎಂದರೆ ಸರಿ.

ನಿಪಿ-1 ರ ದಾಖಲೆ ದಾವಾ ಸ್ವತ್ತಿಗೆ ಸಂಬಂಧಿಸಿದ ಕ್ರಯದ ಕರಾರು ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನನ್ನ ತಂದೆಯ ಹೆಸರು ಇದೆ ಎಂದರೆ ಸರಿ. ನಿಪಿ-1 ರ ದಾಖಲೆಯಲ್ಲಿ ಪ್ರತಿವಾದಿಯರಾದ ನಮ್ಮ ಸಹಿ ಇದೆ ಎಂದರೆ ಸಹಿ ಇರುವುದು ಸರಿಯಾಗಿದೆ. ಸಾಕ್ಷಿ ಮುಂದುವರಿದು ರೂ. 2 ಲಕ್ಷದ ಸಾಲದ ಭದ್ರತೆಗಾಗಿ ಪೋಲಿಸರನ್ನು ಕರೆದುಕೊಂಡು ಬಂದು ಸಹಿ ಹಾಕಿಸಿರುತ್ತಾರೆಂದು ನುಡಿಯುತ್ತಾರೆ. ಸಾಲದ ಭದ್ರತೆಗಾಗಿ ಪೋಲಿಸರನ್ನು ಕರೆದುಕೊಂಡು ಬಂದು ನಿಪಿ-1ರ ದಾಖಲೆಗೆ ಸಹಿ ಪಡೆಯಲಾಗಿದೆ ಎಂದು ತೋರಿಸಲು ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಉತ್ತರಿಸುವುದಿಲ್ಲ. ಪೋಲಿಸರನ್ನು ಕರೆದುಕೊಂಡು ಬಂದು ನಿಪಿ-1ಕ್ಕೆ ನಮ್ಮ ಸಹಿ ಪಡೆದುಕೊಂಡಿದ್ದಾರೆ ಎಂದು ವಾದಿಯ ವಿರುದ್ಧ ನಾವು

ಯಾವುದೇ ಕ್ರಮವನ್ನು ಜರುಗಿಸಿಲ್ಲ. ನಿಪಿ-2ರ ದಾಖಲೆಯಲ್ಲಿ ನಮ್ಮೆಲ್ಲರ ಸಹಿ ಇದೆ ಎಂದರೆ ಖಾಲಿ ದಾಖಲೆಗೆ ಸಹಿ ಪಡೆದುಕೊಂಡಿದ್ದಾರೆ. ಖಾಲಿ ದಾಖಲೆಗೆ ಸಹಿ ಪಡೆದುಕೊಂಡಿದ್ದಾರೆ ಎಂದು ವಾದಿಯ ವಿರುದ್ಧ ಕ್ರಮ ಕೈಗೊಂಡಿದ್ದಿರಾ ಎಂದರೆ ಕ್ರಮ ಕೈಗೊಂಡಿಲ್ಲ ನಮಗೆ ಏನು ಗೊತ್ತಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ದಿಃ 05.03.2022 ರಂದು ದಾವಾ ಸ್ವತ್ತಿನ ಖಾತೆ ನನ್ನ ತಂದೆಯ ಹೆಸರಿಗೆ ಆಯಿತು ಎಂದರೆ ಸರಿ. ದಿಃ 05.11.2022 ರಲ್ಲಿ ದಾವೆ ಸಲ್ಲಿಸಲಾಗಿದೆ ಎಂದರೆ ಸರಿ. ನನ್ನ ತಂದೆಯ ಹೆಸರಿಗೆ ಖಾತೆಯಾದ ನಂತರ ವಾದಿ ಬಂದು ಕ್ರಯಪತ್ರ ಬರೆದುಕೊಡುವಂತೆ ಕೇಳಿದರು ಎಂದರೆ ಸರಿಯಲ್ಲ. ವಾದಿಯ ವಿರುದ್ಧ ಪೋಲಿಸ್ ದೂರನ್ನಾಗಲೀ ನ್ಯಾಯಾಲಯದಲ್ಲಿ ದಾವೆಯನ್ನಾಗಲೀ ಸಲ್ಲಿಸಿದ್ದಿರಾ ಎಂದರೆ ಇಲ್ಲ. ನಮ್ಮ ಪ್ರತಿವಾದ ಪತ್ರದ 3ನೇ ಪುಟದ 4ನೇ ಕಂಡಿಕೆಯಲ್ಲಿ ಹೇಳಿರುದು ಸುಳ್ಳು ಎಂದರೆ ಸರಿಯಲ್ಲ. 2022 ಏಪ್ರಿಲ್ ತಿಂಗಳಲ್ಲಿ ವಾದಿಯು ಕ್ರಯದ ಉಳಿಕ ರೂ. 10,41,250/- ನ್ನು ತೆಗೆದುಕೊಂಡು ಬಂದು ಅದನ್ನು ಸ್ವೀಕರಿಸಿ ಕ್ರಯಪತ್ರ ಬರೆದುಕೊಡುವಂತೆ ನಮ್ಮನ್ನು ಕೇಳಿದರು ಎಂದರೆ ಸರಿಯಲ್ಲ. ದಿಃ 23.06.2022 ರಂದು ವಾದಿಯು ವಕೀಲರ ಮೂಲಕ ನಮಗೆ ನೋಟಿಸ್ ನೀಡಿದ್ದಾರೆ ಎಂದರೆ ನಾವು ಅದನ್ನು ಸ್ವೀಕರಿಸಿಲ್ಲ. ವಕೀಲರಾದ ಶ್ರೀ.ಪ್ರಸನ್ನ ನನಗೆ ಗೊತ್ತಿಲ್ಲ. ನಂತರ ನಮ್ಮ ವಕೀಲರ ಮೂಲಕ ದಿಃ 08.07.2022 ರಂದು ಪ್ರತ್ಯುತ್ತರ ನೋಟೀಸ್ ನಾವು ನೀಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಯಾರಿಗೆ ಗೊತ್ತಿದೆ ಎಂದರೆ ನನ್ನ ತಂದೆಗೆ ಗೊತ್ತಿದೆ. ಅವರನ್ನು ನ್ಯಾಯಾಲಯದ ಮುಂದೆ ವಿಚಾರಣೆಗೆ ಒಳಪಡಿಸುತ್ತೀರಾ ಎಂದರೆ ಅವರಿಗೆ ಆರೋಗ್ಯ ಸರಿ ಇಲ್ಲ.

(**ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು